# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ

C.C No. 158/2017
CW- 01 PW-01

ಹೆಸರು : ಸುರೇಶ ಕೊಂಡೇಕರ

ತಂದೆ ಹೆಸರು : ರಾಮಲಿಂಗಪ್ಪಾ

ವಯಸ್ಸು : 33 ವರ್ಷ

ಉದ್ಯೋಗ : ಲ್ಯಾಂಡ ಸರ್ವೆಯರ್, ಲಿಂಗಸೂರು

ವಾಸ ಸ್ಥಳ : ಲಿಂಗಸೂರು, ಜಿಃ ರಾಯಚೂರು

---

**ಪ್ರಮಾಣವಚನ ಭೋಧಿಲಾಯಿತು. ದಿಃ 11-07-2023**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ**

ನಾನು ಚಿತ್ತಾಪೂರ ಲ್ಯಾಂಡ ಸರ್ವೆಯಲ್ಲಿ ಸೆಪ್ಟೆಂಬರ-2014 ರಿಂದ ಜನೆವರಿ-2022 ರವರೆಗೆ ಭೂ ಮಾಪಕರು ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ನನಗೆ ಚಾಸಾಃ 06 ರಿಂದ 08 ರವರ ಪರಿಚಯ ಇರುತ್ತದೆ. ನನಗೆ ಆರೋಪಿತರ ಪರಿಚಯ ಇರುವುದಿಲ್ಲ.

ನವೆಂಬರ-2016 ರಂದು ನಾನು ಕೋರ್ಟ ಕಮಿಷನರ ಕೆಲಸಕ್ಕೆಂದು ನೇಮಕಗೊಂಡಿದ್ದೇನು. ನಾನು ಸದರಿ ನ್ಯಾಯಾಲಯದ ಆದೇಶದಂತೆ ಇಬ್ಬರು ಪಕ್ಷಗಾರರಿಗೆ ನೋಟಿಸನ್ನು ನೀಡಿ ಅಳತೆ ಮಾಡಲು ಗೋಟೂರು ಮತ್ತು ಸೂಗುರು (ಕೆ) ಗ್ರಾಮಗಳಿಗೆ ಹೋಗಿದ್ದೇನು. ಪ್ರತಿವಾದಿಗಳು ಸರ್ವೆ ಮಾಡುವ ಕಾರ್ಯಕ್ಕೆ ತಕರಾರು ಮಾಡಿದ್ದು, ನಾನು ಪ್ರತಿವಾದಿಗಳಿಗೆ ಸಮಜಾಯಿಸಿ ನೀಡಿರುತ್ತೇನೆ. ನಾನು ಸಮಜಾಯಿಸಿ ಹೇಳಿದರೂ ಸಹ ಪ್ರತಿವಾದಿಗಳು ಚೈನ ಹಾಕಿ ಅಳೆಯಲು ನನಗೆ ಅಡ್ಡಿಪಡಿಸಿದರು. ಅಲ್ಲದೇ ನನ್ನ ಕೈಯಲ್ಲಿರುವ ಫೈಲನ್ನು ಸಹ ಯಾರೋ ಒಬ್ಬ ವ್ಯಕ್ತಿ ಕಸಿದುಕೊಂಡಿರುತ್ತಾನೆ.

ನನಗೆ ಆ ವ್ಯಕ್ತಿಯನ್ನು ನೋಡಿದರೇ ಗುರುತಿಸಲು ಆಗುವುದಿಲ್ಲ. ಸದರಿ ದಿನ ನನ್ನ ಜೊತೆ ಚಾಸಾಃ 09 ರವರು ಸಹ ಸದರಿ ಜಾಗಕ್ಕೆ ಬಂದಿದ್ದರು. ಚಾಸಾಃ 09 ರವರು ಸಹ ವಾದಿ ಮತ್ತು ಪ್ರತಿವಾದಿಗಳಿಗೆ ಸಮಜಾಯಿಸಿ ನೀಡಿದ್ದರು. ಪ್ರತಿವಾದಿಗಳು ಭೂಮಾಪನ ಮಾಡಲು ತಕರಾರು ಮಾಡಿರುತ್ತಾರೆ. ಅಲ್ಲದೇ ದಾಖಲೆಗಳನ್ನು ಸಹ ನಮಗೆ ವಾಪಸ್ ನೀಡಿರುವುದಿಲ್ಲ. ಆ ದಿನ ಸುಮಾರು 10 ರಿಂದ 15 ಜನರಿದ್ದು, ಅವರನ್ನು ಗುರುತಿಸಲು ನನಗೆ ಆಗುವುದಿಲ್ಲ.

ನಂತರ ನಾವು ಕಾಳಗಿ ಪೊಲೀಸ ಠಾಣೆಗೆ ಬಂದು, ನಮ್ಮ ಮೇಲಾಧಿಕಾರಿಗಳ ಸೂಚನೆ ಮೇರೆಗೆ ಒಂದು ದೂರನ್ನು ನೀಡಿರುತ್ತೇನೆ. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1 (ಎ) ಎಂದು ಗುರುತಿಸಲಾಯಿತು.

(ಮಾನ್ಯ ಸ ಸ ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ದಾಖಲೆಗಳನ್ನು ಪರಿಶೀಲಿಸಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸ.ಸ.ಅಭಿಯೋಜಕರವರಿಂದ**

ದಿಃ 23-11-2016 ರಂದು ಮಧ್ಯಾಹ್ನ 02.00 ಗಂಟೆ ಸಮಯದಲ್ಲಿ ಮಾನ್ಯ ಸಿವಿಲ್ ಜಡ್ಜ, ಚಿತ್ತಾಪೂರ ನ್ಯಾಯಾಲಯದ ಆದೇಶದಂತೆ ಓಎಸ ನಂಃ 53/2011 ರಲ್ಲಿ ಭೂಮಾಪನ ಮಾಡುವ ಕಾರ್ಯಕ್ಕೆ ಮೇಲಾಧಿಕಾರಿಗಳ ಆದೇಶದ ಮೇರೆಗೆ ಗೋಟೂರು ಮತ್ತು ಸೂಗುರು (ಕೆ) ಸೀಮಾಂತರದ ಸರ್ವೆ ನಂಃ 91, 141/3, 141/1, 115/ಆ, 209/ಅ, 209/1 ಆ, 208/4, 209/5 ಆ, 212/4 ಮತ್ತು 212/3 ನೇ ಜಮೀನುಗಳಿಗೆ ಹೋಗಿದ್ದೇವು ಎಂದರೆ ಸರಿ. ಅದೇ ರೀತಿ ಚಾಸಾಃ 06 ರಿಂದ 08 ರವರು ಸರ್ವೆ ಮಾಡಲು ತಿಳಿಸಿದ್ದ ಪ್ರಕಾರ ನಾನು ಕಾಳಗಿ ಪೊಲೀಸ

ಠಾಣೆಯ ಚಾಸಾಃ 09 ರವರನ್ನು ಬೆಂಗಾವಲಿಗಾಗಿ ಕರೆದುಕೊಂಡು ಹೋಗಿರುತ್ತೇನೆ ಎಂದರೆ ಸರಿ. ಅದೇ ರೀತಿ ಚಾಸಾಃ 06 ರಿಂದ 08 ರವರು ಹಾಜರಿದ್ದು, ಆರೋಪಿತರೆಲ್ಲರೂ ಸಹ ಹಾಜರಿರುತ್ತಾರೆ ಎಂದರೆ ಸಾಕ್ಷಿಯು ಘಟನೆ ನಡೆದು ಬಹಳ ದಿವಸ ಆಗಿದ್ದರಿಂದ ನನಗೆ ಆರೋಪಿತರನ್ನು ಗುರುತಿಸಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಆಗ ನಾನು ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ ಭೂಮಾಪನ ಮಾಡುತ್ತಿರುವಾಗ ಆಪಾದಿತರೆಲ್ಲರೂ ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸಾಕ್ಷಿಯು ಅಲ್ಲಿದ್ದ ಜನರು ಲಮಾಣಿ ಭಾಷೆಯಲ್ಲಿ ಬೈಯುತ್ತಿದ್ದು, ಯಾರು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಆಗ ಚಾಸಾಃ 09 ರವರು ಆಪಾದಿತರಿಗೆ ಅವಾಚ್ಯ ಶಬ್ದಗಳಿಂದ ಬೈಯಬೇಡಿ ಅಂದಾಗ, ಚಾಸಾಃ 06 ರವರು ನಡುವೆ ಬಿಡಿಸಲು ಹೋದಾಗ, ಆಪಾದಿತ ನಂಃ 1, 3 ಮತ್ತು 5 ರವರು ಚಾಸಾಃ 06 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಕೈಹಿಡಿದು ಜಗ್ಗಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಆಗ 4 ನೇ ಆರೋಪಿಯು ನನ್ನ ಕೈಯಲ್ಲಿರುವ ದಾಖಲೆಗಳ ಪ್ರತಿಗಳನ್ನು ಕಸಿದುಕೊಂಡಿರುತ್ತಾನೆ ಎಂದರೆ ನನಗೆ 4 ನೇ ಆರೋಪಿಯನ್ನು ನೋಡಿದರೇ ಗುರುತಿಸಲು ಆಗುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಆಗ ಚಾಸಾಃ 09 ರವರು 4 ನೇ ಆರೋಪಿಗೆ ಸದರಿ ದಾಖಲೆ ಪ್ರತಿಗಳನ್ನು ವಾಪಸ್ ನೀಡಲು ಕೇಳಿದ್ದರೂ ಸಹ 4 ನೇ ಆರೋಪಿಯು ಸದರಿ ದಾಖಲಾತಿಗಳನ್ನು 3 ನೇ ಆರೋಪಿಯ ಕೈಗೆ ಕೊಟ್ಟಾಗ 3 ನೇ ಆರೋಪಿಯು ದಾಖಲೆಗಳನ್ನು ತೆಗೆದುಕೊಂಡು ಅಲ್ಲಿಂದ ಓಡಿ ಹೋಗಿರುತ್ತಾನೆ ಎಂದರೆ ನನಗೆ 3 ನೇ ಆರೋಪಿಯನ್ನು ನೋಡಿದರೇ ಗುರುತಿಸಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಆಗ ನಾನು ಮತ್ತು ಚಾಸಾಃ 06 ರಿಂದ 09 ರವರು ಸದರಿ ಮೇಲೆ ಹೇಳಿದ ಸರ್ವೆ

ನಂಬರಗಳಿಂದ ಹೊರಗೆ ಬಂದು, ಕಾಳಗಿ ಪೊಲೀಸ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇವೆ ಎಂದರೆ ಸರಿ.

ಆರೋಪಿಗಳು ನನಗೆ ಜೀವಬೆದರಿಕೆ ಹಾಕಿರುತ್ತಾರೆ ಎಂದರೆ ಸಾಕ್ಷಿಯು ವಾದಿಯರಿಗೆ ಆರೋಪಿಗಳು ಜೀವ ಬೆದರಿಕೆ ಹಾಕಿರುತ್ತಾರೆ ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಸಿ.ಬಿ.ಎ ಪರ ಎಸ್.ಬಿ.ಕೆ. ವಕೀಲರಿಂದಃ**

ಆರೋಪಿಗಳು ನನ್ನ ಕರ್ತವ್ಯಕ್ಕೆ ಅಡ್ಡಿಪಡಿಸಿರುವುದಿಲ್ಲ ಮತ್ತು ನನ್ನ ಕಡೆಯಿಂದ ದಾಖಲಾತಿಗಳನ್ನು ಕಸಿದುಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ಆ ದಿನ ಬಹಳಷ್ಟು ಜನರಿದ್ದು, ಯಾರು ನನ್ನ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ ಮತ್ತು ಯಾರು ನನ್ನ ಕಡೆಯಿಂದ ದಾಖಲಾತಿಗಳನ್ನು ಕಸಿದುಕೊಂಡರು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ.

ಸದರಿ ದಿನ ಯಾವುದೇ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾಃ 06 ಮತ್ತು 07 ರವರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ಚಾಸಾಃ 06 ರಿಂದ 08 ರವರಿಗೆ ಜೀವಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಜೆ. ಎಂ. ಎಫ್.ಸಿ. ಚಿತ್ತಾಪೂರ.